ಯಾಕೆ ಅವಸರಿಸುತ್ತಿಲ್ಲ ಎಂದು ಸುಲೇಖ ಅಚ್ಚರಿಪಟ್ಟ. ಮುಜುಗುರಪಡುತ್ತಲೇ, 'ನೀವ್ಯಾಕೆ ಸುಮ್ನೆ ಕೂತೇ ಇದೀರಾ?' ಎಂದ.

'ಸರದಿಯಲ್ಲಿ ನಿಂತು ಕಾಯುವ ನನ್ನ ಪಾಡು ಯಾವಾಗಲೋ ಮುಗಿದುಹೋಗಿದೆ. ಈಗೇನಿದ್ದರೂ ಕಾಯುವವರ ಪಾಡು ನೋಡುತ್ತ, ಒಂದಿಷ್ಟು ಅವರಿಗೆ ನೆರವಾಗುವ ಮನಸ್ಸು ಮಾತ್ರ ಉಳಿದಿದೆ' ಎಂದು ನಿಸ್ತೇಜ ಧ್ವನಿಯಲ್ಲಿ ಉಸುರಿದರು.

ಸುಲೇಖನಿಗೆ ಅಚ್ಚರಿಯೆನ್ನಿಸಿತು. ಕ್ಷಣ ಮಾತ್ರವೂ ಪುರುಸೊತ್ತಿಲ್ಲದ ಜಗತ್ತು ಈಗಿನದು. ಅಂಥದ್ದರಲ್ಲಿ ಇವರದ್ದೊಂದು ವಿಚಿತ್ರ ವೈಖರಿ. ಪ್ರಾಯಶಃ ಇವರ ಕಾಲಚಲನೆಯ ಗಡಿಯಾರ ಸ್ತಬ್ಧವಾಗಿರಬಹುದೆ? ಎನ್ನುವ ಚೇಷ್ಟೆಯ ಅನ್ನಿಸಿಕೆ ಮೂಡಿತು.

ತನ್ನ ಮುಖವನ್ನೇ ತುಸು ಹೊತ್ತು ಎವೆಯಿಕ್ಕದೇ ನೋಡುತ್ತಿದ್ದ ಸುಲೇಖನ ಒಳಗಿನಲ್ಲಿ ಆಗುತ್ತಿದ್ದ ಭಾವನೆಗಳನ್ನು ಸಾಂಬಮೂರ್ತಿ ಊಹಿಸಬಲ್ಲವರಾಗಿದ್ದರು. ತನ್ನೊಳಗಿನ ಈ ಸ್ಥಿತಿಯನ್ನು ಅವನಲ್ಲಿ ಹೇಳುವುದು ಹೇಗೆ? ಹೇಳಿದರೂ ಅರ್ಥವಾಗುತ್ತದೆಯೇ? ಮುದುಕನಿಗೆ ಅರಳು ಮರಳು ಅಂತ ಭಾವಿಸುವ ಸಾಧ್ಯತೆಯೇ ಹೆಚ್ಚು ಅಂದುಕೊಂಡು ಮತ್ತೆ ಮುಗುಳ್ನಕ್ಕು ಸುಮ್ಮನಾದರು.

ಆ ಹಾಲ್‌ನಲ್ಲಿ ಆವರೆಗಿನ ಸಣ್ಣ ಕಲರವದ ತೆಳು ಮೌನವನ್ನು ಕಾದು ಕುಳಿತಿದ್ದ ಜನರ ಗಡಿಬಿಡಿ, ಅವರ ಥರಥರದ ಮಾತುಗಳು, ಅತ್ತಿತ್ತ ಸರಿದಾಟ ಕಲಕಿಬಿಟ್ಟಿತ್ತು. ಸ್ವರ್ಗ ಲೋಕದ ಬಾಗಿಲು ತೆರೆದು ಸುಳಿಮಿಂಚಿನ ದರ್ಶನ ಕೊಡುವ ಕನ್ನಿಕೆಯಂತೆ ಸರದಿಯಲ್ಲಿ ನಿಂತವರನ್ನು ಆಗಾಗ್ಗೆ ಓರ್ವ ಸಿಸ್ಟರ್ ಬಾಗಿಲು ತೆರೆದು ಒಳಗೆ ಕರೆಯುತ್ತಿದ್ದಳು. ಅವಳ ಮುಖದಲ್ಲಿ ಒಂದಿಷ್ಟು ಅಸಹನೆ, ನಿಮಗೆ ಉಪಕಾರ ಮಾಡುತ್ತಿದ್ದೇನೆ ಎನ್ನುವ ಸೂಕ್ಷ್ಮ ಅಹಂಭಾವ ಇಣುಕುತ್ತಿತ್ತು.

ಈಚೆ ಇದ್ದ 'ಔಟ್' ಎನ್ನುವ ಚಿಕ್ಕ ಅಕ್ಷರದ ಬೋರ್ಡಿನ ಕೆಳಗಿನ ಮತ್ತೊಂದು ಬಾಗಿಲಿನಿಂದ ಮೊದಲು ಒಳ ಹೋದವರು ಕೈಯಲ್ಲೊಂದು ಪ್ರಿಸ್ಕ್ರಿಪ್ಷನ್ ಚೀಟಿ ಹಿಡಿದು ಹೊರಬರುತ್ತಿದ್ದರು. ಹಲವರಿಗೆ ಅವರ ಜೊತೆ ಬಂದವರು ಮುತ್ತಿಕೊಂಡು 'ಡಾಕ್ಟರ್ ಏನು ಹೇಳಿದರು?' ಎಂದು ಸಣ್ಣಗೆ ಕಾತರದಿಂದ ಪ್ರಶ್ನಿಸುತ್ತ, ಅಪಾರ ಕರುಣೆ ತೋರಿಸುತ್ತ ಹಾಲ್‌ನ ಹೊರಗೆ ಸಾಗುತ್ತಿದ್ದರು. ಇನ್ನೂ ಕೆಲವರು ಹೊರಬರುವಾಗ ನಿಸ್ತೇಜರಾಗಿ, ಕಣ್ಣೊಳಗೆ ಕಂಡೂಕಾಣದಂತೆ ಮುಂದಿನ ಬದುಕಿನ ದುಗುಡವನ್ನು ವ್ಯಕ್ತಪಡಿಸುತ್ತಿದ್ದರು. ಅದನ್ನೆಲ್ಲ ಗಮನಿಸುತ್ತ ಕೂತಂತೆಯೇ ಓರ್ವ ವೃದ್ಧ ಹೊರಗೆ ಬಂದು ಒಮ್ಮೆ ಸುತ್ತೆಲ್ಲ ನೋಟ ಬೀರಿ, ತಡವರಿಸುವ ಹೆಜ್ಜೆ ಹಾಕುತ್ತ ಸುಲೇಖನ ಪಕ್ಕದ ಖಾಲಿ ಸೀಟಿನಲ್ಲಿ ಕುಳಿತ.

ಈ ಪಕ್ಕದಲ್ಲಿದ್ದ ಸಾಂಬಮೂರ್ತಿ ಬಾಗಿ ಆತನ ಬಳಿ, 'ಏನು ತೊಂದರೆ ನಿಮಗೆ, ಡಾಕ್ಟರ್ ಏನು ಹೇಳಿದ್ರು' ಎಂದದ್ದೇ ಆತ ಮುಖ ಮುಚ್ಚಿ ಮುಳುಮುಳು ಅಳತೊಡಗಿದ. ತನ್ನ ಸೀಟಿನಿಂದ ಎದ್ದ ಸಾಂಬಮೂರ್ತಿ ಆತನ ಆ ಪಕ್ಕದ ಸೀಟಿನಲ್ಲಿ ಕುಳಿತು ಆತನ ಹೆಗಲು ತಟ್ಟುತ್ತ, ಅವನ ಕೈಯಲ್ಲಿದ್ದ ಚೀಟಿಯನ್ನ ಓದಿದರು. ಅಷ್ಟರಲ್ಲಿ ಸುಧಾರಿಸಿಕೊಂಡ ಆ ವೃದ್ಧ, 'ಮುದುಕಾಗೋತನಕ ಬದುಕಬಾರದು, ಮೊದ್ಲೇ ನೆಗೆದುಬಿದ್ರೆ ಈ ಕಷ್ಟ ಇರೋದಿಲ್ಲಾಗಿತ್ತು' ಎಂದು ಹೆಗಲಲ್ಲಿದ್ದ ಪಂಚೆಯಿಂದ ಕಣ್ಣು, ಮೂಗು ಒರೆಸಿಕೊಂಡರು.

'ಬನ್ನಿ ನಿಧಾನಕ್ಕೆ, ಹೊರಗೆ ಹೋಗೋಣ' ಎನ್ನುತ್ತ ಅವರನ್ನು ಎಬ್ಬಿಸಿ, ಆಸರೆಯಾಗಿ ಸಾಂಬಮೂರ್ತಿ ಅವರನ್ನ ಹೊರಗೆ ಕರೆದುಕೊಂಡು ಹೋದರು.

'ಅಂದುಕೊಂಡಿದ್ದಕ್ಕಿಂತ ವಿಚಿತ್ರ ಈ ಮನುಷ್ಯ' ಎಂದು ಸುಲೇಖನಿಗೆ ಅನ್ನಿಸಿತು. ಸುಮಾರು ಹೊತ್ತಿನ ನಂತರ ಒಳಬಂದ ಸಾಂಬಮೂರ್ತಿ ಮತ್ತೆ ಸುಲೇಖನ ಪಕ್ಕದಲ್ಲೇ ಕುಳಿತರು.

ಸುಲೇಖನ ಪ್ರಶ್ನಾರ್ಥಕ ನೋಟದ ಅಂತರ್ಯವನ್ನು ಅರ್ಥಮಾಡಿಕೊಂಡವರಂತೆ, 'ವಯಸ್ಸಾದವರಿಗೆ ಯಾರೂ ದಿಕ್ಕಿಲ್ಲದಿದ್ದರೆ ಎಷ್ಟೊಂದು ಕಷ್ಟ ಅಲ್ವಾ?' ಎಂದರು. ಅವರು ಸಹಜವಾಗಿ ಹೇಳಿದ್ದರೂ ಸುಲೇಖನಿಗೆ ಆ ಮಾತು ಮನಸ್ಸಿನಲ್ಲಿ ಮುಳ್ಳು ಮುರಿದಂತೆ ಆಯಿತು. ಸುಮ್ಮನೆ ಮುಖ ಕೆಳಗೆ ಹಾಕಿದ.

ಅಷ್ಟರಲ್ಲಿ 'ಔಟ್' ಬಾಗಿಲಿನಿಂದ ಓರ್ವ ತರುಣಿ ಕಂಕುಳಲ್ಲೊಂದು ಹಸುಗೂಸು, ಬಲಗೈನ ಬೆರಳು